ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿ.ಸಂಸ್ಥೆಗೆ ಈ ವರೆವಿಗೆ ಒಟ್ಟು ರೂ. 80.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಸಂಸ್ಥೆಯು ಡಿಸೆಂಬರ್ 2010ರ ಅಂತ್ಯದವರೆಗೆ 8 ಸ್ಥಳಗಳಲ್ಲಿ 294 ಮನೆಗಳನ್ನು ಪೂರ್ಣಗೊಳಿಸಿದೆ.

ಈ) ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿ. ಸಂಸ್ಥೆಯು ಪೂರ್ಣಗೊಂಡ ಮನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಹಸ್ತಾಂತರಿಸದೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ತಹಶೀಲ್ದಾರರಿಗೆ ಹಸ್ತಾಂತರಿಸುವುದು. ಇದುವರೆಗೆ 176 ಮನೆಗಳನ್ನು ಹಸ್ತಾಂತರಿಸಲಾಗಿದೆ.

ವಿಧಾನಸೌಧದಲ್ಲಿ ಇಲಿ ಮತ್ತು ಕ್ರಿಮಿಕೀಟ ನಾಶಕ ವ್ಯವಸ್ಥೆಯ ಖರ್ಚಿನ ವಿವರ

75(171): ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2008–09 ಮತ್ತು 2010–11ರ ಸಾಲಿನಲ್ಲಿ ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಇಲಿ ಮತ್ತು ಕ್ರಿಮಿ ಕೀಟನಾಶಕ ವ್ಯವಸ್ಥೆಯನ್ನು ಯಾರಿಗೆ ಗುತ್ತಿಗೆ ಆಧಾರದಲ್ಲಿ ವಹಿಸಲಾಗಿದೆ?

ಆ) ಇದಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಲಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು);

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) 2008–09 ಮತ್ತು 2009–10ನೇ ಸಾಲಿನಲ್ಲಿ ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡ ಮತ್ತು ವಿ.ವಿ. ಗೋಪುರ ಕಟ್ಟಡಗಳಲ್ಲಿ ಇಲಿ ಮತ್ತು ಕ್ರಿಮಿ ಕೀಟನಾಶಕ ವ್ಯವಸ್ಥೆಯನ್ನು ಟೆಂಡರ್ ಮೂಲಕ ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿತ್ತು.

2010–11ನೇ ಸಾಲಿನಲ್ಲಿ ಇಲಿ ಮತ್ತು ಕ್ರಿಮಿ ಕೀಟನಾಶಕ ವ್ಯವಸ್ಥೆಯನ್ನು ಟೆಂಡರ್ ಮೂಲಕ ಮೆ: ಅಡೆಪ್ಟ್ ಪೆಸ್ಟ್ ಕಂಟ್ರೋಲ್ ಇಂಡಿಯಾ, ಬೆಂಗಳೂರು ಸಂಸ್ಥೆಗೆ ವಹಿಸಲಾಗಿದೆ.

ಆ)	2008–09 ನೇ	ರೂ. 2,68,984–00
	2009–10 ನೇ	ರೂ. 2,68,900–00
	2010–11 ನೇ	ರೂ. 3,39,000–00
	ಒಟ್ಟು ಮೊತ್ತ	**ರೂ. 8,76,684–00**